**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 72 ವೆಚ್ಚ-12/2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:02.03.2022

**ಸುತ್ತೋಲೆ**

ವಿಷಯ : ಗುತ್ತಿಗೆದಾರರು ಮತ್ತು ಸಮಾಲೋಚಕರ ನೋಂದಣಿ ಕುರಿತು.

*****

ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ ಅಧ್ಯಾಯ-19 ರಲ್ಲಿ ರಾಜ್ಯದಲ್ಲಿ ಗುತ್ತಿಗೆದಾರರು, ಸಮಾಲೋಚಕರ ನೋಂದಣಿಗೆ ಸಂಬಂಧಿಸಿದಂತೆ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಅದರಂತೆ ಎಲೆಕ್ಟ್ರಿಕಲ್ ಗುತ್ತಿಗೆದಾರರನ್ನು ನೋಂದಣಿ ಮಾಡಲು ಮುಖ್ಯ ವಿದ್ಯುತ್ ಪರಿವೀಕ್ಷಕರು ಮತ್ತು ಸಿವಿಲ್ ಗುತ್ತಿಗೆದಾರರು, Project Management Consultants, Architects/Interiors ಮತ್ತು Service Consultants ರವರನ್ನು ನೋಂದಣಿ ಮಾಡಲು ಲೋಕೋಪಯೋಗಿ ಇಲಾಖೆಯು ಸಕ್ಷಮವಾಗಿರುತ್ತದೆ. ಮುಂದುವರೆದು, KPWD Para 251 ರಲ್ಲಿ ".......These registrations are valid for all works undertaken by all the Government Departments, Government undertakings in the respective jurisdictions. No separate registration is required in other Government Departments and Government undertakings" ಎಂದು ತಿಳಿಸಲಾಗಿರುತ್ತದೆ. ಅದರಂತೆ ಬೇರೆ ಬೇರೆ ಇಲಾಖೆಗಳಲ್ಲಿ ಮತ್ತು ನಿಗಮ / ಮಂಡಳಿಗಳಲ್ಲಿ ಪ್ರತ್ಯೇಕವಾಗಿ ಗುತ್ತಿಗೆದಾರರ ನೋಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಆದರೆ, ಕೆಲವೊಂದು ಇಲಾಖೆ ಮತ್ತು ನಿಗಮ/ಮಂಡಳಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾದ ನಂತರ ಮತ್ತೊಮ್ಮೆ ಪ್ರತ್ಯೇಕವಾಗಿ ನೋಂದಣಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದು KPWD ಕಂಡಿಕೆ 251 ರಲ್ಲಿ ತಿಳಿಸಿದ ಏಕಗವಾಕ್ಷಿ ನೋಂದಣಿ ಪ್ರಕ್ರಿಯೆ ನೀತಿಗೆ ವಿರುದ್ಧವಾಗಿರುತ್ತದೆ ಹಾಗೂ ನೋಂದಣಿ ಪ್ರಕ್ರಿಯೆಯಲ್ಲಿ ಅನಗತ್ಯ ಹೆಚ್ಚುವರಿ ಹಂತವು ಸೃಜನೆಯಾದಂತಾಗಿರುತ್ತದೆ.

ಆದ್ದರಿಂದ, ಲೋಕೋಪಯೋಗಿ ಇಲಾಖೆ ಮತ್ತು ಮುಖ್ಯ ವಿದ್ಯುತ್ ಪರಿವೀಕ್ಷಕರಿಂದ ನೋಂದಣಿಯಾದ ಗುತ್ತಿಗೆದಾರರ ಪಟ್ಟಿಯನ್ನು ಎಲ್ಲಾ ಇಲಾಖೆ/ನಿಗಮ/ಮಂಡಳಿಗಳ ಟೆಂಡರುಗಳಲ್ಲಿ ಅನ್ವಯಿಸುವಂತೆ ತಿಳಿಸಿದೆ ಹಾಗೂ ಸರ್ಕಾರದ ಇಲಾಖೆಗಳಲ್ಲಿ ನಿಗಮ, ಮಂಡಳಿಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಈಗ ಚಾಲ್ತಿಯಲ್ಲಿರುವ ಪ್ರತ್ಯೇಕ ನೋಂದಣಿ ಪದ್ಧತಿಯನ್ನು ಕೂಡಲೇ ರದ್ದುಗೊಳಿಸುವಂತೆ ತಿಳಿಸಿದೆ.

ಕಾಂತಮ್ಮ ಎನ್.ಎಂ.
**(ಕಾಂತಮ್ಮ ಎನ್.ಎಂ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)
2/3/2022

**ಇವರಿಗೆ:**

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.